ಅವಕಾಶ ಕೊಡಿ. ಅನಂತರ ಅವರು ಹೇಳಿಕೆ ಮಾಡುತ್ತಾರೆ, ಅದು ನಿಮಗೆ ತೃಪ್ತಿ ತರದಿದ್ದರೆ ಮುಂದಿನದು ನಿಮಗೆ ಬಿಟ್ಟಿದ್ದು.

ಶ್ರೀ ಎಂ.ಪಿ. ವೆಂಕಟೇಶ್: ಅಧ್ಯಕ್ಷರೆ ಇವರಿಗೆ ಸದನ ನಡೆಸುವುದಕ್ಕೆ ಇಷ್ಟವಿಲ್ಲ. ಇದೆಲ್ಲ ಪ್ರಚಾರಕ್ಕಾಗಿ ಮಾಡುತ್ತಿರುವುದು, ದಯವಿಟ್ಟು ಇವರನ್ನೂ ಹೊರಗೆ ಹಾಕಿ. ಆಡಬಾರದ ಆಟವೆಲ್ಲ ಆಡಿದ್ದಾರೆ. ಮೊದಲು ಇವರನ್ನು ಹೊರಗೆ ಹಾಕಿ.

ಅಧ್ಯಕ್ಷರು: ಒಬ್ಬರಿಗೊಬ್ಬರು ಕೆಸರು ಎರಚಿಕೊಂಡು ಮಾತನಾಡುವುದು ಯಾರಿಗೂ ಇದು ಗೌರವ ತರುವುದಿಲ್ಲ, ಸದನ ನಡೆಸಲು ಅವಕಾಶ ಕೊಡುತ್ತೀರೋ ಇಲ್ಲವೋ?

[ಧರಣಿಯಲ್ಲಿದ್ದ ಮಾನ್ಯ ಸದಸ್ಯರು ಇಲ್ಲ ಎಂದು ಕೈಯಾಡಿಸುವರು]

ಅಧ್ಯಕ್ಷರು: ಆಯಿತು. ಈಗ ಸದನವನ್ನು 2.30ಕ್ಕೆ ಮುಂದೂಡಲಾಗಿದೆ.

[ಸದನವು ಮಧ್ಯಾಹ್ನ 12 ಗಂಟೆ 23 ನಿಮಿಷಕ್ಕೆ ಮುಂದೂಡಲ್ಪಟ್ಟಿತು]

(ಸದನವು ಭೋಜನ ವಿರಾಮದ ನಂತರ ಪುನ: 3.39 ಗಂಟೆಗೆ ಸಮಾವೇಶಗೊಂಡಿತು)

ಅಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ.

2. ಪ್ರಕಟಣೆ

ವಿಷಯ: (ಅ) ಮಾನ್ಯ ಸದಸ್ಯರಾದ ತನ್ವೀರ್‌ಸೇಠ್‌ರವರನ್ನು ಮೈಸೂರಿನಲ್ಲಿ ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ.

ದಿನಾಂಕ 11.02.07ರಂದು ವಿಧಾನ ಸಭಾ ಸದಸ್ಯರಾದ ಶ್ರೀ ತನ್ವೀರ್ ಸೇಠ್ ಅವರನ್ನು ಮೈಸೂರಿನಲ್ಲಿ ಕಾವೇರಿ ನ್ಯಾಯಾಧಿಕರಣದ ತೀರ್ಪನ್ನು ಪ್ರತಿಭಟಿಸಿ ರಸ್ತೆ ತಡೆ ಉಂಟು ಮಾಡಿದ್ದಕ್ಕಾಗಿ ಕರ್ನಾಟಕ ಪೊಲೀಸ್ ಕಾಯಿದೆ ಕಲಂ 71ರ ಮೇರೆಗೆ ಬೆಳಿಗ್ಗೆ 11.20 ಗಂಟೆಗೆ ಬಂಧಿಸಿ, ಅದೇ ದಿನ ಅಪರಾಹ್ನ 12.00 ಗಂಟೆಗೆ ಬಿಡುಗಡೆ ಮಾಡಲಾಯಿತು ಎಂದು ಮೈಸೂರು ನಗರ ಪೊಲೀಸ್ ಕಮಿಷನರ್ ಅವರು ತಿಳಿಸಿರುತ್ತಾರೆ.

(ಆ) ಮಾನ್ಯ ಸದಸ್ಯರಾದ ವಾಟಾಳ್‌ನಾಗರಾಜ್‌ರವರನ್ನು ರಾಜಭವನದ ಮುಂಭಾಗದಲ್ಲಿ ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ. ಮಾನ್ಯ ಸದಸ್ಯರಾದ ಪಿ.ಸಿ. ಮೋಹನ್‌ರವರನ್ನು ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಬಂಧಿಸಿ ಬಿಡುಗಡೆ ಮಾಡಿರುವ ಬಗ್ಗೆ.

ಅಧ್ಯಕ್ಷರು: ದಿನಾಂಕ:12.02.07ರಂದು ವಿಧಾನ ಸಭಾ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್‌ರವರನ್ನು ರಾಜಭವನದ ಮುಂಭಾಗದಲ್ಲಿ ಕಾವೇರಿ ಪ್ರಾಧಿಕಾರ ನೀಡಿರುವ ತೀರ್ಪಿನ ವಿರುದ್ಧ ರಾಜಭವನಕ್ಕೆ ಮುತ್ತಿಗೆ ಹಾಕುವ ಸಂಬಂಧ ಸಾರ್ವಜನಿಕರ ಓಡಾಟ ಮತ್ತು ವಾಹನ ಸಂಚಾರಕ್ಕೆ ಅಡ್ಡಿಪಡಿಸಿದ ಕಾರಣಕ್ಕಾಗಿ ಕರ್ನಾಟಕ ಪೊಲೀಸ್ ಕಾಯಿದೆ ಕಲಂ 70 ರ ಮೇರೆಗೆ ಮಧ್ಯಾಹ್ನ 1 ಗಂಟೆ 15 ನಿಮಿಷಕ್ಕೆ ಬಂಧಿಸಿ ಕಲಂ 71 ರ ಮೇರೆಗೆ ಅದೇ ದಿನ ಮಧ್ಯಾಹ್ನ 2-00 ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯ ಪೊಲೀಸ್ ಇನ್‌ಸ್ಪೆಕ್ಟರ್ ತಿಳಿಸಿರುತ್ತಾರೆ. ದಿನಾಂಕ : 12.02.07 ರಂದು ವಿಧಾನ ಸಭಾ ಸದಸ್ಯರಾದ ಶ್ರೀ ಪಿ.ಸಿ. ಮೋಹನ್‌ರವರನ್ನು ಮೈಸೂರು ಬ್ಯಾಂಕ್ ಸರ್ಕಲ್ ಬಳಿ ಕಾವೇರಿ ನ್ಯಾಯಾಧೀಕರಣದ ತೀರ್ಪನ್ನು ವಿರೋಧಿಸಿ ಪ್ರತಿಭಟನೆ ಮಾಡಿ ಕಲಂ 144 ನಿಷೇಧಾಜ್ಞೆ ಕಾನೂನನ್ನು ಉಲ್ಲಂಘನೆ ಮಾಡಿದ್ದಕ್ಕಾಗಿ ಕರ್ನಾಟಕ ಪೊಲೀಸ್ ಕಾಯಿದೆ ಕಲಂ 71ರ ಮೇರೆಗೆ ಬೆಳಿಗ್ಗೆ 11.00 ಗಂಟೆಗೆ ಬಂಧಿಸಿ, ಅದೇ ದಿನ ಮಧ್ಯಾಹ್ನ 12.45 ಗಂಟೆಗೆ ಬಿಡುಗಡೆ ಮಾಡಲಾಯಿತೆಂದು ಚಿಕ್ಕಪೇಟೆ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ತಿಳಿಸಿರುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಒಂದು vehicle ಓಡಾಡಿಲ್ಲ, ಮಾನ್ಯ ವಾಟಾಳ್‌ನಾಗರಾಜ್‌ರವರು vehicle ಹೇಗೆ ಅಡ್ಡ ಹಾಕುತ್ತಾರೆ?

ಶ್ರೀ ಜೆ.ಸಿ. ಮಾಧುಸ್ವಾಮಿ: ಒಂದು vehicle ಇಲ್ಲ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಗೆ vehicle ಅನ್ನು ತಡೆದರು. ಇಡೀ ದಿವಸ vehicle ಇಲ್ಲ .

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಿಮ್ಮ ಸರ್ಕಾರದ ಮಾಹಿತಿ ಪ್ರಕಾರ ಯಾವ vehicle ಕೂಡ ಬೆಂಗಳೂರಿನಲ್ಲಿ ಓಡಾಡಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಯಾವ vehicle ಗೆ ಅಡ್ಡ ಹೋಗಿದ್ದರು?

ಶ್ರೀ ಜೆ.ಸಿ. ಮಾಧುಸ್ವಾಮಿ: ಯಾವ vehicle ಓಡಾಡಿದವು ಎಂದು ನಮಗೆ ಹೇಳಬೇಕು.

ಒಬ್ಬರು ಮಾನ್ಯ ಸದಸ್ಯರು: ಮಾನ್ಯ ರೆಡ್ಡಿಯವರೆ police vehicle.

ಶ್ರೀ ಜೆ.ಸಿ.ಮಾಧುಸ್ವಾಮಿ: ಯಾವ vehicle ಓಡಾಡಿದವು ಎಂದು ಹೇಳಬೇಕು, ಅವತ್ತು ಒಂದು vehicle ಇರಲಿಲ್ಲ.

ಶ್ರಿ ಜಿ.ವಿ. ಶ್ರೀರಾಮರೆಡ್ಡಿ: ಒಂದು police vehicle ಇಲ್ಲ ಅಲ್ಲಿ.

ಒಬ್ಬರು ಮಾನ್ಯ ಸದಸ್ಯರು: ಅಲ್ಲಿ ಅವುಗಳೇ ಇದ್ದಿದ್ದು.

(ಗೊಂದಲ)

ಒಬ್ಬರು ಮಾನ್ಯ ಸದಸ್ಯರು: ಎಮ್ಮೆ ಮೇಲೆ ಸವಾರಿ ಮಾಡಿ....

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ: ಅದನ್ನೆ ಕೇಳಿದೆವು, ಅವರನ್ನು ಕೇಳಿ ನನ್ನನ್ನು ಏನು ಕೇಳುತ್ತೀರಾ ಎಂದು ಹೇಳಿದರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ನಾವು ಕೇಳಿದೆವು, ನಾನು ಯಾವ vehicleಗೆ ಅಡ್ಡ ಹಾಕಿಲ್ಲ ಅಂತ ಅವರು ಹೇಳುತ್ತಾರೆ.

ಅಧ್ಯಕ್ಷರು: ರಾಜಭವನ ಮುತ್ತಿಗೆ ಹಾಕುವ ಸಂಬಂಧ...

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ರಾಜಭವನದ ಮುಂದೆ ಒಂದು ವಾಹನ ಓಡಾಡಲಿಲ್ಲ. ನಾನು ನಿಮಗೆ ಹೇಳುವುದಾದರೆ ಜಟಕಾ ಗಾಡಿನೂ ತಡೆಯಲಿಲ್ಲ. ನನ್ನ ಮೇಲೆ ನೀವು....

ಅಧ್ಯಕ್ಷರು: ಆಯಿತು, ಮುತ್ತಿಗೆ ಹಾಕುವ ಸಂಬಂಧ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಅದು ಸರಿಯಲ್ಲ, ಸತ್ಯಕ್ಕೆ ದೂರವಾದುದು.

ಅಧ್ಯಕ್ಷರು: ಆಯಿತು, ಈಗ ರಾಜಭವನವನ್ನು ನೀವು ಮುತ್ತಿಗೆ ಹಾಕುವುದಕ್ಕೆ ಹೋಗಿದ್ದೀರಿ, ಆ ಸಂಬಂಧದಲ್ಲಿ ನಿಮ್ಮನ್ನು ಅರೆಸ್ಟ್ ಮಾಡಿದ್ದಾರೋ ಇಲ್ಲವೋ?

ಶ್ರೀ ಜೆ.ಸಿ.ಮಾಧುಸ್ವಾಮಿ: ಅಲ್ಲ, ಯಾವ ವಾಹನ ತಡೆದರು?

ಅಧ್ಯಕ್ಷರು: ವಾಹನ ಎಂದು ಹೇಳಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅರೆ, ಅವರು ಹೇಳಿದ್ದಕ್ಕೆ ನಾವು ಕೇಳಿದೆವು.

ಶ್ರೀ ವಾಟಾಳ್ ನಾಗರಾಜ್: ನಾನು ವಾಹನ ತಡೆಯಲಿಲ್ಲ, ನೀವು ಸುಮ್ಮನೆ ಏನು ಹೀಗೆ? ನೀವು ನಮಗೆ ರಕ್ಷಣೆ ಕೊಡಬೇಕು ಸ್ವಾಮಿ. 12ನೆ ತಾರೀಖು ಇಡೀ ರಾಜ್ಯದಲ್ಲಿ ಹಾಗೂ ಬೆಂಗಳೂರಿನಲ್ಲಿ ವಾಹನಗಳೇ ಓಡಾಡಿಲ್ಲ. ಅದರಲ್ಲೂ ರಾಜಭವನದ ಹತ್ತಿರ ಪೊಲೀಸ್‌ನವರನ್ನು ಬಿಟ್ಟರೆ ವಾಹನಗಳು ಎಲ್ಲೂ ಇಲ್ಲ. ನಾನು ವಾಹನವನ್ನು ತಡೆದಿರುವುದರಿಂದ ಬಂಧನ ಮಾಡಲಾಗಿದೆ ಎಂದು ಹೇಳುತ್ತಿರತಕ್ಕಂಥಾದ್ದು ಸರಿಯಾದ ಕ್ರಮ ಅಲ್ಲ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಇದರ ಮೇಲೆ ಚರ್ಚೆ ಮಾಡೋಣ, ಇದನ್ನು half an hour discussion ಗೆ ತೆಗೆದುಕೊಳ್ಳಿ. ಅವತ್ತು ಗಾಡಿಗಳು ಇಲ್ಲ ಎಂದು ಹೇಳಿಲ್ಲ. ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಈಗ ನೀವು ರಾಜಭವನದ ಮುಂಭಾಗದಲ್ಲಿ ಕಾವೇರಿ ಪ್ರಾಧಿಕಾರ ನೀಡಿರುವ ತೀರ್ಪಿನ ವಿರುದ್ದ ರಾಜಭವನಕ್ಕೆ ಮುತ್ತಿಗೆ ಹಾಕುವ ಸಂಬಂಧ.

(ಉ) ವಿಷಯ: ಡಾ: ಎಂ. ರಾಮಜೋಯಿಸರವರು ಬರೆದಿರುವ ರಾಜ್ಯ ವ್ಯವಸ್ಥೆಯ ಉಗಮ ಧ್ಯೇಯ ಮತ್ತು ಕರ್ತವ್ಯ ಆಡಳಿತಗಾರರಿಗೆ ಆಚಾರ ಸಂಹಿತೆ ಬಿಡುಗೆ ಸಮಾರಂಭ ಸಂಜೆ 5.30 ಕ್ಕೆ ಮಾನ್ಯ ಶಾಸಕರು ಭಾಗವಹಿಸುವ ಬಗ್ಗೆ.

ಈಗ ನ್ಯಾಯಮೂರ್ತಿ ಡಾ: ಎಂ ರಾಮಜೋಯಿಸ್‌ರವರು ಬರೆದಿರುವ ರಾಜ್ಯ ವ್ಯವಸ್ಥೆಯ ಉಗಮ, ಧ್ಯೇಯ ಮತ್ತು ಕರ್ತವ್ಯ ಆಡಳಿತಗಾರರಿಗೆ ಆಚಾರ ಸಂಹಿತೆಯ ಬಿಡುಗಡೆ ಸಮಾರಂಭವು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಈ ದಿನ ಸಂಜೆ 5.30 ಕ್ಕೆ ನಡೆಯಲಿದೆ. ತಾವುಗಳೆಲ್ಲರೂ ಭಾಗವಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

3. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಕಾವೇರಿ ನದಿ ನೀರಿನ ತೀರ್ಪಿನ ಬಗ್ಗೆ ಸರ್ಕಾರದ ನಿಲುವನ್ನು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಈ ಸಭೆಯನ್ನು ಮುಂದಕ್ಕೆ ಹಾಕುವುದಕ್ಕೆ ಮುಂಚೆ ಪ್ರತಿದಿನ ಈ ರೀತಿ ನಾವು ಯಾವ್ಯಾವದೋ ಕಾರಣಕ್ಕೆ ಸಭೆಯನ್ನು ಮುಂದಕ್ಕೆ ಹಾಕುತ್ತಿದ್ದೇವೆ. ದಿನಾಂಕ 5ರಂದು ಕಾವೇರಿ ತೀರ್ಪು ಬಂದಿತು. 14ನೇ ತಾರೀಖಾದರೂ ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ನೀತಿಯನ್ನು, ಸರ್ಕಾರದ ನಿಲುವನ್ನು ಇನ್ನು ಸ್ಪಷ್ಟಪಡಿಸಿಲ್ಲ.

ಅಧ್ಯಕ್ಷರು: ನಿನ್ನೆ ಹೇಳಿದರಲ್ಲ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೂ ಕೂಡ ಬರುವುದಿಲ್ಲ. ಸ್ಪಷ್ಟ ಕೂಡ ಪಡಿಸುವುದಿಲ್ಲ. ಸರ್ಕಾರ ಸದನದಲ್ಲಿ ಸ್ಪಷ್ಟಪಡಿಸಬೇಕೆಂದು ಹೇಳಿ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಭಾವಿಗೆ ಬಂದರು)

ಅಧ್ಯಕ್ಷರು: ನಿನ್ನೆ ನೀವು ಇದ್ದಾಗಲೇ ಹೇಳಿದ್ದಾರೆ. ಈ ದಿನ ದೆಹಲಿಗೆ ಬೇರೆ ಕೆಲಸಕ್ಕೆ ಹೋಗಿದ್ದಾರೆ. ನಾಳೆ ಅವರು ಬರುತ್ತಾರೆ. ನಿನ್ನೆ ನಿಮ್ಮ